





# ಲಿಂಬೆಯನ್ನೇ ನಂಬಿ ಗೆದ್ದವರು

ಚಿತ್ರ–ಬರಹ: **ವಿ.ಬಾಲಕೃಷ್ಣ ಶಿರ್ವ**

ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ಸುಧೀರ್ ಶೆಟ್ಟಿಯವರು ಇಲ್ಲಿ ತಮ್ಮ 22 ಎಕರೆ ಜಾಗದಲ್ಲಿ 9 ಎಕ್ರೆಯಲ್ಲಿ ರಬ್ಬರ್ ಬೆಳೆ, 7 ಎಕ್ರೆ ಜಾಗದಲ್ಲಿ ತಾಳೆ, ಸುಮಾರು 3 ಎಕ್ರೆ ಜಾಗದಲ್ಲಿ ಅಡಿಕೆ ಮತ್ತು ತೆಂಗು ಬೆಳೆಸಿದ್ದಾರೆ. ಈ ಎಲ್ಲಾ ಕೃಷಿಗೆ 'ಝೀರೊ ಬಜೆಟ್ ಸ್ಪಿರಿಚುವಲ್ ಫಾರ್ಮಿಂಗ್' ಎಂಬ ಸುಭಾಷ್ ಪಾಳೇಕರ್‌ರವರ ವಿಧಾನವನ್ನು ಆಳವಡಿಸಿದ್ದಾರೆ. ಈ ವಿಧಾನದ ಪ್ರಕಾರ ತೋಟದಲ್ಲಿಯೇ ಬೆಳೆದ ಹುಲ್ಲನ್ನು ಕತ್ತರಿಸಿ ಅಡಿಕೆ ಮತ್ತು ತೆಂಗಿನ ಬುಡಕ್ಕೆ ಹಾಕುತ್ತಾರೆ. ಈ ಬೆಳೆಗೆ ಸ್ಪ್ರಿಂಕಲ್‌ನಿಂದ ನೀರು ಹಾಯಿಸುತ್ತಾರೆ. ರಬ್ಬರ್ ಬೆಳೆಯ ನಡುವೆ ಕೊಕ್ಕೊ ಹಾಕಿದ್ದಾರೆ. ಇದಕ್ಕೆ ನೈಟ್ರೋಜನ್ ಫಿಕ್ಸ್‌ಷನ್ ಪೊದೆ ಹಬ್ಬಿಸಿದ್ದಾರೆ. ಇದು ಕಳೆ ನಿಯಂತ್ರಿಸುತ್ತದೆ. ಸಾವಯವ ಗೊಬ್ಬರ ಹಾಕಿದ್ದು ಮಳೆಗೆ ಕೊಚ್ಚಿ ಹೋಗುವುದಿಲ್ಲ, ನೀರು ಆವಿಯಾಗುವುದಿಲ್ಲ. ರಬ್ಬರ್ ಕೃಷಿ ಬೆಳೆಯುವ ಹಂತದಲ್ಲಿರುವುದರಿಂದ ಅದರಲ್ಲಿ ಆದಾಯ ಇನ್ನೂ ಬಂದಿಲ್ಲ.

ಪೆರ್ಡೂರು ಮೇಲ್ಪೇಟೆಯಿಂದ 2 ಕಿ.ಮೀ. ಸಾಗಿದರೆ ಸಿಗುವ ಮಿಂಚುಬೆಟ್ಟುವಿನ ಸುಧೀರ್ ಶೆಟ್ಟಿಯವರ ಕೈ ಹಿಡಿದಿರುವುದು 4 ಎಕರೆಯಲ್ಲಿ ಹಾಕಿರುವ ಆಲ್ ಸೀಸನ್ ಪೂಜಾ ಎಂಬ ತಳಿಯ ಲಿಂಬೆ. ಇದನ್ನು ಸ್ವಲ್ಪ ಗುಂಡಿ ತೋಡಿ ಹಟ್ಟಿಗೊಬ್ಬರ ಹಾಕಿ ಮುಚ್ಚಿ ಗಿಡ ನೆಡುತ್ತಾರೆ. ನೆಟ್ಟ ನಂತರ ಗಿಡ ಬೆಳೆಯುತ್ತಿರುವಾಗ 5ಕೆ.ಜಿ. ಸೆಗಣಿ, 2 ಲೀಟರ್ ಗೋಮೂತ್ರ, 2 ಕೆ.ಜಿ. ಬೆಲ್ಲ (ಕಪ್ಪುಬೆಲ್ಲ), 2ಕೆ.ಜಿ. ಹುರಳಿ ಹಿಟ್ಟು, 1 ಹಿಡಿಯಷ್ಟು ಕಾಡಿನ ಮಣ್ಣು ಇತ್ಯಾದಿಗಳನ್ನು ಬೆರೆಸಿ, ಎರಡು ದಿನಗಳಲ್ಲಿ ಬೇವಾಮೃತ ತಯಾರಾಗುತ್ತದೆ. ಇದನ್ನು ಡ್ರಿಪ್ ನೀರಾವರಿಯ ಮುಖಾಂತರ ಗಿಡಗಳಿಗೆ ಹಾಯಿಸುತ್ತಾರೆ.

'ಈಗ ಪ್ರಮುಖ ಆದಾಯದ ಮೂಲ ಲಿಂಬೆ. ವಾರ್ಷಿಕವಾಗಿ 60,000 ಲಿಂಬೆ ಇಳುವರಿ ಪಡೆಯುತ್ತಿದ್ದೇನೆ. ಬೇಸಿಗೆಯಲ್ಲಿ ವಾರಕ್ಕೆ 1000 ದಿಂದ 2500ದಷ್ಟು ಇಳುವರಿ ಸಿಗುತ್ತಿದೆ. ಜೂನ್, ಜುಲೈ ತಿಂಗಳಲ್ಲಿ 2000 ದಿಂದ 3000 ಲಿಂಬೆ ಕೀಳುತ್ತೇನೆ. ಲಿಂಬೆಗೆ ಕನಿಷ್ಟ 2 ರೂಪಾಯಿ ಬೆಲೆಯಿದ್ದು ಕನಿಷ್ಟ ವಾರಕ್ಕೆ ರೂ.4000ದಷ್ಟು ಆದಾಯ ಬರುತ್ತಿದೆ' ಎನ್ನುತ್ತಾರೆ ಸುಧೀರ್.

ಅವರ ಜಲವೃದ್ಧಿ, ಮಳೆಪೂರಣ ಯೋಜನೆ ತುಂಬಾ ವಿಶಿಷ್ಟವಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ. 'ವಾನರಾಯ್ ಬಂದಾರ' ಯೋಜನೆಯ ಅಳವಡಿಕೆ ಚೆನ್ನಾಗಿದೆ. ಸಿಮೆಂಟ್ ಚೀಲದಲ್ಲಿ ಹೊಯಿಗೆ ತುಂಬಿ ಕಟ್ಟಿದ ಚೀಲಗಳನ್ನು ನದಿಗೆ ಅಡ್ಡಲಾಗಿ ತಡೆಗೋಡೆ ನಿರ್ಮಿಸಿದ್ದಾರೆ. (5ಫೀಟ್ ಎತ್ತರದವರೆಗೆ) ನೀರು ಬೃಹತ್ತಾಗಿ ತುಂಬಿಕೊಳ್ಳುತ್ತದೆ. ಇದರ ಮೇಲೆ ಸಿಲ್ಪಾಲಿನ್ ಎನ್ನುವ ಟಾರ್ಪಲ್ ಹಾಸುತ್ತಾರೆ. ಇನ್ನೊಂದು ಬದಿಗೆ ಸಣ್ಣ ಪ್ರಮಾಣದಲ್ಲಿ ಸೋರಿ ಹೋಗುವ ನೀರನ್ನೇ ತೋಟಕ್ಕೆ ಸ್ಪ್ರಿಂಕಲ್ ಮುಖಾಂತರ ಚಿಮ್ಮಿಸುತ್ತಾರೆ.

ಇದಕ್ಕೆ ಪೂರಕವಾಗಿ ತಮ್ಮ ಮುಕ್ಕಾಲು ಎಕರೆ ಜಾಗದಲ್ಲಿ 200 ಅಡಿ ಉದ್ದ, 150 ಅಡಿ ಅಗಲದ ಕೆರೆಯನ್ನೂ ನಿರ್ಮಾಣ ಮಾಡಿದ್ದಾರೆ. ಇದೊಂದು ಬೃಹತ್ ಇಂಗು ಗುಂಡಿಯಾಗಿದ್ದು ಬೇಸಿಗೆಯಲ್ಲೂ ನಾಲ್ಕು ಅಡಿ ನೀರು ತುಂಬಿರುತ್ತದೆ. ಮನೆಗೆ ಬೇಕಾಗುವಷ್ಟು ತರಕಾರಿಯನ್ನು ಬೆಳೆಯಿಸುವ ಇವರು, ಅದಕ್ಕೂ ದಿನ್ನೆ ನಿರ್ಮಿಸಿ ಅದರ ಮೇಲೆ ಮಲ್ಚಿಂಗ್ ಶೀಟ್ ಹಾಕಿ, ತರಕಾರಿ ಬೀಜ ಬಿತ್ತುತ್ತಾರೆ. (ಲೇಖಕರ ಮೊಬೈಲ್ 9632662560).